59

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ದೊಡ್ಡಬಳ್ಳಾಪುರ

ಉಪಸ್ಥಿತರುಃ ಶ್ರೀ. ಮಲ್ಲಿಕಾರ್ಜುನ,
ಬಿ.ಕಾಂ. ಎಲ್.ಎಲ್.ಬಿ. (Spl)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ದೊಡ್ಡಬಳ್ಳಾಪುರ.

**ದಿನಾಂಕಃ 23-05-2012**

**ಓ.ಎಸ್. 19/2007**

ವಾದಿಯರುಃ-

1. ನಾಗರಾಜು,
ಬಿನ್ ಚಿಕ್ಕಪುಟ್ಟಪ್ಪ @ ಪುಟ್ಟಪ್ಪ
ವಯಸ್ಸು 28 ವರ್ಷ,
ವಾಸಃ ಮಾರಸಂದ್ರ,
ಹೆಸರಘಟ್ಟ ಹೋಬಳಿ,
ಬೆಂಗಳೂರು ಉತ್ತರ ತಾಲ್ಲೂಕ್,
ಬೆಂಗಳೂರು ಜಿಲ್ಲೆ.

2. ವಿಶ್ವಾಸ್‌ಗೌಡ,
ಬಿನ್ ಕುಬೇರ,
ಅಪ್ರಾಪ್ತ ವಯಸ್ಕನಾಗಿದ್ದು, ಅವರ
ಪೋಷಕರಾದ
ಶ್ರೀಮತಿ. ಪದ್ಮಾ @ ಪದ್ಮಾವತಿ,
ಕೋಂ ಕುಬೇರ,
ವಯಸ್ಸು 29 ವರ್ಷ,

Scanned with CamScanner

ವಾಸಃ ದೊಡ್ಡತುಮಕೂರು,
ಮಧುರೆ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

(ಶ್ರೀ.ಎಂ.ಬಿ. ಶಂಕರೇಗೌಡ-ವಾದಿಯರ ಪರ ವಕೀಲರು)

ವಿರುದ್ಧ

ಪ್ರತಿವಾದಿಯರುಃ

1. ಚಿಕ್ಕಪುಟ್ಟಪ್ಪ
ಬಿನ್ ಲೇಟ್ ಕೆಂಪಣ್ಣ,
ವಯಸ್ಸು 70 ವರ್ಷ,

2. ಶ್ರೀಮತಿ. ಹನುಮಕ್ಕ,
ಕೋಂ ಚಿಕ್ಕಪುಟ್ಟಪ್ಪ
ವಯಸ್ಸು 65 ವರ್ಷ,

3. ಶ್ರೀ. ಮಂಜುನಾಥ,
ಬಿನ್ ಲೇಟ್ ರಾಮಾಂಜನಪ್ಪ
ವಯಸ್ಸು 20 ವರ್ಷ,
ವಾಸಃ ಲಕ್ಷ್ಮಿದೇವಿಪುರ, ತುಬುಗೆರೆ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕ್.

4. ಶ್ರೀ. ಸುಬ್ರಮಣಿ,
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 43 ವರ್ಷ,

Scanned with CamScanner

ವಾಸಃ ಶೆಟ್ಟಿಗೋವಿಂದ ದೊಡ್ಡಿ ಹಳ್ಳಿ
ಬಿಡದಿ ಹೋಬಳಿ,
ರಾಮನಗರ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

5. ಶ್ರೀ. ರಾಮಕೃಷ್ಣಯ್ಯ
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 40 ವರ್ಷ,
ವಾಸಃ ವೆಟರ್ನರಿ ಆಸ್ಪತ್ರೆ,
ರಾಜಘಟ್ಟ ಹಳ್ಳಿ,
ಕಸಬಾ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕ್.

6. ಶ್ರೀ. ಆನಂದಮೂರ್ತಿ,
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 36 ವರ್ಷ,
ವಾಸಃ6ನೇ ಕ್ರಾಸ್‌ನ ಕೊನೆ ಮನೆ,
ಶಾಂತಿನಗರ, ಮುತ್ಯಾಲಮ್ಮ ರಸ್ತೆ
ದೊಡ್ಡಬಳ್ಳಾಪುರ ಟೌನ್.

7. ಶ್ರೀ. ವಿಜಯ ಕುಮಾರ್
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 34 ವರ್ಷ,

8. ಶ್ರೀ. ಕುಬೇರ,
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 30 ವರ್ಷ,

Scanned with CamScanner

9. ಶ್ರೀ. ಕೆಂಪೇಗೌಡ,
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 26 ವರ್ಷ,

10. ಶ್ರೀ. ಮುನೇಗೌಡ,
ಬಿನ್ ಚಿಕ್ಕಪುಟ್ಟಪ್ಪ
ವಯಸ್ಸು 23 ವರ್ಷ,
1, 2, 7 ರಿಂದ 10ನೇ
ಪ್ರತಿವಾದಿಯರ
ವಾಸಃಗಂಡರಾಜಪುರ,
ತುಬುಗೆರೆ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

11. ಶ್ರೀ. ದೊಡ್ಡಪುಟ್ಟಣ್ಣ,
ಬಿನ್ ಲೇಟ್ ಕೆಂಪಣ್ಣ,
ವಯಸ್ಸು 73 ವರ್ಷ,
ವಾಸಃ ಗಂಡರಾಜಪುರ,
ತುಬುಗೆರೆ ಹೋಬಳಿ,
ದೊಡ್ಡಬಳ್ಳಾಪುರ ತಾಲ್ಲೂಕ್,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

(ಶ್ರೀ.ಪಿ. ಶಂಕರಪ್ಪ –3, 5ನೇ ಪ್ರತಿವಾದಿ ಪರ ವಕೀಲರು)
(ಸಯದ್ ನಿಸಾರುಲ್ಲಾ-1,2,4, 6 ರಿಂದ 10ನೇ ಪ್ರತಿವಾದಿಯರ ಪರ ವಕೀಲರು)
(ಎ.ಕೆ.ಕೆ.-11ನೇ ಪ್ರತಿವಾದಿಯ ಪರ ವಕೀಲರು)

ದಾವೆ ಹೂಡಿದ ದಿನಾಂಕ : 11/01/2007

ದಾವೆಯ ಸ್ವರೂಪ : ಪಾಲು ವಿಭಾಗಕ್ಕಾಗಿ

Scanned with CamScanner

ಸಾಕ್ಷಿಯ ವಿಚಾರಣೆ
ಪ್ರಾರಂಭಿಸಿದ ದಿನಾಂಕ : 27/10/2010

ತೀರ್ಪು ಘೋಷಣೆ ಮಾಡಿದ ದಿನಾಂಕ : 23/05/2012

ಒಟ್ಟು ಕಾಲಾವಧಿ : ವರ್ಷ · ತಿಂಗಳು ದಿನ

05 04 12

23/5/012

(ಮಲ್ಲಿಕಾರ್ಜುನ)
ಹಿರಿಯ ಸಿವಿಲ್ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.

## ತೀರ್ಪು

1. ಈ ದಾವೆಯನ್ನು ವಾದಿಯರು ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿಯ ತಮ್ಮ ಹಿಸ್ಸೆಯ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ಹೂಡಿದ್ದು, ವಾದಪತ್ರದ ಮುಖ್ಯಾಂಶಗಳು ಈ ಕೆಳಗಿನಂತಿರುತ್ತದೆ.

2. ವಾದಿಯರು ಮತ್ತು 1 ರಿಂದ 10ನೇ ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಸ್ವತ್ತುಗಳು ಹಿಂದೂ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ಉಭಯ ಪಕ್ಷಕಾರರು ಜಂಟಿ ಸ್ವಾಧೀನಹೊಂದಿ ಅನುಭವಿಸುತ್ತಿದ್ದು, ಈವರೆಗೆ ತಮ್ಮಲ್ಲಿ ವಿಭಾಗವಾಗಿರುವುದಿಲ್ಲವೆಂದು, 1 ಮತ್ತು 2ನೇ ಪ್ರತಿವಾದಿಯರು 1ನೇ ವಾದಿ ಮತ್ತು 3 ರಿಂದ 10ನೇ

Scanned with CamScanner

ಪ್ರತಿವಾದಿಯರ ತಂದೆ ತಾಯಿಗಳಾಗಿದ್ದು, ಪ್ರತಿವಾದಿಯರು ದಾವಾ ಸ್ವತ್ತುಗಳ ಬಗ್ಗೆ ಕಾಳಜಿ ವಹಿಸದೇ ವಾದಿಯರ ಹಕ್ಕಿಗೆ ಮಾರಕವಾಗಿ ನಡೆದುಕೊಳ್ಳುತ್ತಿದ್ದು, ಹೀಗಾಗಿ ವಾದಿಯರು ಷೆಡ್ಯೂಲ್ ಸ್ವತ್ತುಗಳಲ್ಲಿರುವ ತಮ್ಮ ಹಿಸ್ಸೆಯ ಪಾಲು ವಿಭಾಗ ಮಾಡಿಕೊಡುವಂತೆ 1 ಮತ್ತು 2ನೇ ಪ್ರತಿವಾದಿಯರನ್ನು ಕೇಳಿಕೊಂಡಿದ್ದು, ಅದನ್ನು ಅವರು ತಿರಸ್ಕರಿಸಿ ಉಳಿದ ಪ್ರತಿವಾದಿಯರೊಂದಿಗೆ ಶ್ಯಾಮೀಲಾಗಿ ದಾವಾ ಷೆಡ್ಯೂಲ್ ಸ್ವತ್ತನ್ನು 3ನೇ ವ್ಯಕ್ತಿಗಳಿಗೆ ಪರಭಾರೆ ಮಾಡಲು ಪ್ರಯತ್ನಿಸುತ್ತಿದ್ದು, ಹೀಗಾಗಿ ಈ ದಾವೆ ಹೂಡಿದ್ದು, ಷೆಡ್ಯೂಲ್ ಸ್ವತ್ತುಗಳಲ್ಲಿ ತಮಗೆ 1/10 ಹಿಸ್ಸೆ ಇದ್ದು, ಅದನ್ನು ವಿಭಾಗ ಮಾಡಿ ಪ್ರತ್ಯೇಕ ಸ್ವಾಧೀನ ಕೊಡಿಸುವಂತೆ ಕೇಳಿಕೊಂಡಿರುತ್ತಾರೆ.

3. ದಾವಾ ಸಮನ್ಸ್ ಜಾರಿಯಾದ ನಂತರ 1 ರಿಂದ 10ನೇ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ಹಾಜರಾಗಿದ್ದು, ದಾವೆ ವಿಚಾರಣೆಯಲ್ಲಿರುವಾಗ 11ನೇ ಪ್ರತಿವಾದಿಯನ್ನು ಮಧ್ಯಂತರ ಅರ್ಜಿಯ ಮೂಲಕ ಸೇರ್ಪಡೆ ಮಾಡಿದ್ದು, ಅವರೂ ಸಹ ತಮ್ಮ ವಕೀಲರ ಮೂಲಕ ಹಾಜರಾಗಿ ವಾದಪತ್ರದ ಪತ್ರದ ಅಂಶಗಳನ್ನು ಅಲ್ಲಗಳೆದು ಪ್ರತಿವಾದಪತ್ರ ಸಲ್ಲಿಸಿರುತ್ತಾರೆ. 1, 2, 6, 8 ರಿಂದ 10ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದಪತ್ರದ ಮುಖ್ಯಾಂಶಗಳು ಈ ಕೆಳಗಿನಂತಿರುತ್ತದೆ.

Scanned with CamScanner

4. ವಾದಿಯ ದಾವೆ ಕಾನೂನು ಮತ್ತು ಸಂಗತಿಗಳಿಂದ ಊರ್ಜಿತಯೋಗ್ಯವಾಗಿರುವುದಿಲ್ಲ. ವಾದಪತ್ರದಲ್ಲಿ ಪ್ರತಿಪಾದಿಸಿರುವ ಸಂಗತಿಗಳು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಅವುಗಳನ್ನು ಈ ಪ್ರತಿವಾದಿ ಒಪ್ಪುವುದಿಲ್ಲ. ಪಕ್ಷಕಾರರ ಸಂಬಂಧಗಳ ಬಗ್ಗೆ ತಿಳಿಸಿರುವ ವಿಷಯಗಳ ಬಗ್ಗೆ ತಮ್ಮ ತಕರಾರು ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ, ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ಉಭಯೇತರರು ಜಂಟಿ ಸ್ವಾಧೀನಹೊಂದಿ ಅನುಭವಿಸುತ್ತಿದ್ದಾರೆನ್ನುವುದು ಸಂಪೂರ್ಣ ಸುಳ್ಳಿನಿಂದ ಕೂಡಿದ್ದು, ಅವುಗಳಲ್ಲಿ ವಾದಿಯರಿಗೆ 1/10 ಹಿಸ್ಸೆ ಇರುತ್ತದೆನ್ನುವುದು, ಅದರ ಪಾಲು ವಿಭಾಗ ಮಾಡಿಕೊಡುವಂತೆ 1 ಮತ್ತು 2ನೇ ಪ್ರತಿವಾದಿಯರಿಗೆ ಕೇಳಿಕೊಂಡಾಗ ನಿರಾಕರಿಸಿರುತ್ತಾರೆನ್ನುವುದು, ಈ ಕಾರಣಕ್ಕೆ ವಾದಿಯರು ದಾವೆ ಹೂಡಿರುತ್ತಾರೆನ್ನುವುದು ಸುಳ್ಳಿನಿಂದ ಕೂಡಿರುತ್ತದೆ. ದಾವೆಯನ್ನು ಸರಿಯಾಗಿ ಮೌಲ್ಯ ನಿರ್ಧರಣೆ ಮಾಡಿರುವುದಿಲ್ಲ. ವಾದಪತ್ರಕ್ಕೆ ಸಂದಾಯ ಮಾಡಿರುವ ನ್ಯಾಯಾಂಗ ಶುಲ್ಕ ಸಮರ್ಪಕವಾಗಿರುವುದಿಲ್ಲ. 1ನೇ ವಾದಿ ದಾವಾ ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈಗಾಗಲೇ ತನ್ನ ಹಿಸ್ಸೆಯ ಬಾಬತ್ತು ₹ 3,00,000/- ಗಳ ನಗದು ಹಾಗೂ ₹ 2,00,000/-ಗಳ ಮೌಲ್ಯದ ಆಭರಣಗಳನ್ನು ದಿ:10-10-2005 ರಂದು ಪಂಚಾಯಿತಿದಾರರ

ಸಮಕ್ಷಮ ಪಡೆದು ಹಕ್ಕು ಬಿಡುಗಡೆ ಪತ್ರ ಬರೆದುಕೊಡುವುದಾಗಿ ಒಪ್ಪಿದ್ದರೂ ಸಹ ಇವತ್ತಿನವರೆಗೂ ಹಕ್ಕು ಬಿಡುಗಡೆ ಪತ್ರ ಬರೆದುಕೊಡದೆ ಸುಳ್ಳು ಸಂಗತಿಗಳೊಂದಿಗೆ ದಾವೆ ಹೂಡಿದ್ದು, ಅದು ಊರ್ಜಿತಯೋಗ್ಯವಾಗಿರುವುದಿಲ್ಲ. ವಾದಿಯ ದಾವೆ ಅವಶ್ಯಕ ಪಕ್ಷಕಾರರ ಅಸೇರ್ಪಡೆಯಿಂದ ದೋಷಪೂರ್ಣವಾಗಿರುತ್ತದೆ. ದಾವಾ ಆಸ್ತಿ ಐಟಂ ನಂ.2, 6, 7 ಸ್ವತ್ತುಗಳು ಶ್ರೀಮತಿ. ಹನುಮಕ್ಕ ಕೋಂ ಚಿಕ್ಕಪುಟ್ಟಣ್ಣನವರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ದಾವಾ ಆಸ್ತಿ ಐಟಂ ನಂ.1 ಜಮೀನ್ ಸರ್ವೆ ನಂ.108/1 ರಲ್ಲಿ 2–29 ಗುಂಟೆ ಪುಟ್ಟಣ್ಣ, ಚಿಕ್ಕಪುಟ್ಟಣ್ಣ ಮತ್ತು ಅಕ್ಕಯ್ಯಮ್ಮಳ ಜಂಟಿ ಖಾತೆಯಾಗಿದ್ದು, ಸರ್ವೆ ನಂ.108/2 ರಲ್ಲಿ 2–12 ಗುಂಟೆ ಬಿ.ಪುಟ್ಟಣ್ಣ ಬಿನ್ ಕೆಂಪಯ್ಯನವರ ಹೆಸರಿನಲ್ಲಿದ್ದು, ದಾವಾ ಆಸ್ತಿ ಐಟಂ ನಂ.3 ಪುಟ್ಟಣ್ಣನ ಸ್ವಯಾರ್ಜಿತ ಆಸ್ತಿಯಾಗಿದ್ದು, ದಾವಾ ಆಸ್ತಿ ಐಟಂ ನಂ.4 ರಲ್ಲಿ ಸರ್ವೆ ನಂ.137/3 ರಲ್ಲಿ ಪುಟ್ಟಣ್ಣ ಬಿನ್ ಕೆಂಪಯ್ಯನ ಪಿತ್ರಾರ್ಜಿತ ಆಸ್ತಿಯಾಗಿದ್ದು, ಅದು ಆತನ ಹಿಸ್ಸೆಗೆ ದಿ:20–05–1962ರ ಪಾಲು ವಿಭಾಗದಲ್ಲಿ ಬಂದಿದ್ದು, ದಾವಾ ಆಸ್ತಿ ಐಟಂ ನಂ.2 ಸ್ವತ್ತು ಸಂಪೂರ್ಣವಾಗಿ 1 ಮತ್ತು 2ನೇ ಪ್ರತಿವಾದಿಯರಿಗೆ ಸೇರಿದ್ದು, ಹೀಗಾಗಿ ದಾವಾ ಸ್ವತ್ತುಗಳಲ್ಲಿ ವಾದಿಯರಿಗೆ ಹಕ್ಕು ಮತ್ತು ಅಧಿಕಾರ ಇರುತ್ತದೆನ್ನುವುದು ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತದೆ.

Scanned with CamScanner

ಅವುಗಳಲ್ಲಿ ವಾದಿಯರಿಗೆ ಹಿಸ್ಸೆ ಇರುವುದಿಲ್ಲ. ಅದುದರಿಂದ ದಾವೆಯನ್ನು ವಜಾ ಮಾಡುವಂತೆ ಕೇಳಿಕೊಂಡಿರುತ್ತಾರೆ.

5. 5ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದಪತ್ರದ ಮುಖ್ಯಾಂಶಗಳು ಈ ಕೆಳಗಿನಂತಿರುತ್ತದೆ.

ಅವರು ವಾದಪತ್ರದ ಅಂಶಗಳನ್ನು ಒಪ್ಪಿಕೊಂಡು ದಾವಾ ಷೆಡ್ಯೂಲ್ ಸ್ವತ್ತುಗಳು ವಾದಿ, ಪ್ರತಿವಾದಿಯರ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಅವುಗಳಲ್ಲಿ ವಾದಿ, ಪ್ರತಿವಾದಿಯರಿಗೆ ಸಮನಾದ ಹಕ್ಕು ಇದ್ದು, ವಾದಿಯರ ದಾವೆಯನ್ನು ಕಾನೂನು ರೀತ್ಯಾ ಡಿಕ್ರಿ ಮಾಡಲು ತಮ್ಮ ಅಭ್ಯಂತರವಿರುವುದಿಲ್ಲವೆಂದು ಹೇಳಿಕೊಂಡಿರುತ್ತಾರೆ.

6. 11ನೇ ಪ್ರತಿವಾದಿ ಸಲ್ಲಿಸಿದ ಪ್ರತಿವಾದಪತ್ರದ ಮುಖ್ಯಾಂಶಗಳು ಈ ಕೆಳಗಿನಂತಿರುತ್ತದೆ.

ವಾದಿಯರ ದಾವೆ ಕಾನೂನು ಮತ್ತು ಸಂಗತಿಗಳಿಂದ ಊರ್ಜಿತಯೋಗ್ಯವಾಗಿರುವುದಿಲ್ಲ. ಕೆಂಪಣ್ಣನಿಗೆ ದೊಡ್ಡಪುಟ್ಟಣ್ಣ ಮತ್ತು ಚಿಕ್ಕಪುಟ್ಟಪ್ಪ ಅಲಿಯಾಸ್ ಪುಟ್ಟಪ್ಪ ಎನ್ನುವ ಮಕ್ಕಳಿದ್ದು, ಅವರಿಬ್ಬರು ಬದುಕಿರುವಾಗಲೇ ವಾದಪತ್ರದಲ್ಲಿ ದೊಡ್ಡಪುಟ್ಟಪ್ಪ ಮೃತಪಟ್ಟಿರುತ್ತಾನೆಂದು ಹೇಳಿದ್ದು, ಈ ಕಾರಣಕ್ಕಾಗಿಯೂ ಸಹ ದಾವೆ ವಜಾ ಆಗತಕ್ಕದ್ದು. ದೊಡ್ಡಪುಟ್ಟಪ್ಪ ಮತ್ತು ಚಿಕ್ಕಪುಟ್ಟನವರ ಮಧ್ಯೆ

Scanned with CamScanner

ಈಗಾಗಲೇ ಹೆಬ್ಬಾಲ್ ಸ್ವತ್ತುಗಳ ಬಗ್ಗೆ ದಿ:02-05-1982 ರಂದು ವಿಭಾಗವಾಗಿದ್ದು, ದೊಡ್ಡಪುಟ್ಟಸ್ವಾಮಿಗೆ ಹೆಬ್ಬಾಲ್ ಸ್ವತ್ತುಗಳಲ್ಲಿ ಅರ್ಧ ಹಿಸ್ಸೆ ಇದ್ದರೂ ಸಹ ಅತ ಅವಿಧ್ಯಾವಂತನಾಗಿರುವುದರಿಂದ ಅದರ ದುರ್ಲಾಭ ಪಡೆದ ವಾದಿಯರು ಮತ್ತು ಇತರೆ ಪ್ರತಿವಾದಿಯರು ಆಸ್ತಿಯ ಖಾತೆಯನ್ನು ಅತನ ಹೆಸರಿಗೆ ಖಾತೆ ಮಾಡಿಸದೇ ಮೋಸ ಮಾಡಿದ್ದು, ಅವರೇ ಅದನ್ನು ಅನುಭವಿಸುತ್ತಿದ್ದು, ವಾಸ್ತವದಲ್ಲಿ ದೊಡ್ಡಪುಟ್ಟಸ್ವಾಮಿಗೆ ಅರ್ಧ ಹಿಸ್ಸೆ ಬರಬೇಕಾಗಿದ್ದು, ಅದನ್ನು ವಿಭಾಗ ಮಾಡಿ ಪ್ರತ್ಯೇಕ ಸ್ವಾಧೀನ ಕೊಡಿಸುವಂತೆ ಕೇಳಿಕೊಂಡಿರುತ್ತಾರೆ.

7. ವಾದಪತ್ರ, ಪ್ರತಿವಾದ ಪತ್ರಗಳನ್ನು ಪರಿಶೀಲಿಸಲಾಗಿ 1 ರಿಂದ 5 ವಿವಾದಾಂಶಗಳನ್ನು ರಚಿಸಿದ್ದಿರುತ್ತದೆ.

## ವಿವಾದಾಂಶಗಳು

1. Whether plaintiffs prove that they are the joint family members along with defendants No.1 to 10 and suit schedule properties are their joint family ancestral properties?
2. Whether defendants prove that suit schedule properties are their self acquired properties?
3. Whether suit is properly valued and court fee paid is sufficient?

Scanned with CamScanner

4. Whether the plaintiffs are entitle for the relief as prayed for them?
5. What decree or order?

8. ವಾದಿ ತನ್ನ ವಾದ ಸಮರ್ಥನೆಯಲ್ಲಿ ತನ್ನ ಪರವಾಗಿ ಒಟ್ಟು ಒಂದು ಸಾಕ್ಷಿ ವಿಚಾರಣೆ ಮಾಡಿ ನಿಪಿ-1 ರಿಂದ 43 ದಾಖಲೆಗಳನ್ನು ಹಾಜರ್‌ಪಡಿಸಿದ್ದು, ಪ್ರತಿವಾದಿಯರ ಪರವಾಗಿ ಒಟ್ಟು ಮೂರು ಸಾಕ್ಷಿಗಳ ವಿಚಾರಣೆ ಮಾಡಿ ನಿಡಿ-1 ರಿಂದ 31 ದಾಖಲೆಗಳನ್ನು ಹಾಜರ್‌ಪಡಿಸಿರುತ್ತಾರೆ.

9. ಉಭಯಪಕ್ಷಕಾರರ ಪರ ಪ್ರಾಜ್ಞ ವಕೀಲರ ವಾದ ಆಲಿಸಿದೆ. ವಾದ ಪತ್ರ, ಪ್ರತಿವಾದ ಪತ್ರ, ಸಾಕ್ಷಿಗಳ ಹೇಳಿಕೆ ಹಾಗೂ ದಾಖಲೆಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಮೇಲಿನ ವಿವಾದಾಂಶಗಳಿಗೆ ನಾನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ವಿವಾದಾಂಶ 1, 2 ಮತ್ತು 4–ಭಾಗಶಃ ಸಕಾರಾತ್ಮಕವಾಗಿ
ವಿವಾದಾಂಶ 3- ಸಕಾರಾತ್ಮಕವಾಗಿ
ವಿವಾದಾಂಶ 5- ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ

## ಕಾ ರ ಣ ಗ ಳುಃ

10. **ವಿವಾದಾಂಶಗಳ ಸಂಖ್ಯೆ 1 ಮತ್ತು 2 ಃ-**

ಈ ವಿವಾದಾಂಶಗಳು ಒಂದಕ್ಕೊಂದು ಸಂಬಂಧಪಟ್ಟವುಗಳಾಗಿದ್ದು

Scanned with CamScanner

ವಿಷಯಗಳ ಪುನರಾವರ್ತನೆ ತಡೆಯಲು ಅವುಗಳನ್ನು ಜಂಟಿಯಾಗಿ ಚರ್ಚೆಗೆ ತೆಗೆದುಕೊಂಡಿರುತ್ತೇನೆ.

11. ವಾದಿಯರ ಪ್ರಕಾರ ತಾವು 1 ರಿಂದ 10ನೇ ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಷೆಡ್ಯೂಲ್ ಸ್ವತ್ತುಗಳು ತಮ್ಮ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ಪ್ರತಿವಾದಿಗಳೊಂದಿಗೆ ತಾವು ಜಂಟಿ ಸ್ವಾಧೀನಹೊಂದಿ ಅನುಭವಿಸುತ್ತಿದ್ದು, ಅವುಗಳಲ್ಲಿ 1ನೇ ವಾದಿ, ಪ್ರತಿವಾದಿಯರು ಸಮನಾದ ಹಕ್ಕು ಮತ್ತು ಅಧಿಕಾರ ಇರುತ್ತದೆಂದು, 2ನೇ ವಾದಿ 8ನೇ ಪ್ರತಿವಾದಿಯ ಮಗನಿದ್ದು, ಆತನ ಹಿಸ್ಸೆಯಲ್ಲಿ 2ನೇ ವಾದಿಗೆ ಸಮನಾದ ಹಕ್ಕು ಇರುತ್ತದೆಂದು ಹೇಳಿಕೊಂಡಿರುತ್ತಾರೆ.

12. ಈ ಸಂಗತಿಯನ್ನು ಅಲ್ಲಗಳೆದಿರುವ ಪ್ರತಿವಾದಿಯರು ವಾದಿ, ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಾಗಿರುತ್ತಾರೆನ್ನುವುದು, ದಾವಾ ಷೆಡ್ಯೂಲ್ ಸ್ವತ್ತುಗಳು ನಮ್ಮ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ವಾದಿಯರು ಪ್ರತಿವಾದಿಗಳೊಂದಿಗೆ ಜಂಟಿ ಸ್ವಾಧೀನಹೊಂದಿ ಅನುಭವಿಸುತ್ತಿದ್ದರೆನ್ನುವುದನ್ನು ನಿರಾಕರಿಸಿರುತ್ತಾರಲ್ಲದೇ, ದಾವಾ ಸ್ವತ್ತುಗಳು 1 ಮತ್ತು 2ನೇ ಪ್ರತಿವಾದಿಯರ ಸ್ವಯಾರ್ಜಿತ ಆಸ್ತಿಗಳಾಗಿದ್ದು, ವಾದಿಯರು ತಮ್ಮ ಹಿಸ್ಸೆಯ ಭಾಗವನ್ನು

Scanned with CamScanner

ಈಗಾಗಲೇ ಪಂಚಾಯಿತಿದಾರರ ಸಮಕ್ಷಮ ಹಣದ ಮೂಲಕ ಪಡೆದಿದ್ದು, ಹಕ್ಕು ಬಿಡುಗಡೆಪತ್ರ ಬರೆದುಕೊಡವುದಾಗಿ ಭರವಸೆ ನೀಡಿ ಅದನ್ನು ಬರೆದುಕೊಡದೇ ಸುಳ್ಳು ಸಂಗತಿಗಳ ಆಧಾರದ ಮೇಲೆ ಈ ದಾವೆ ಹೂಡಿದ್ದು, ಅವರು ಯಾವತ್ತೂ ಷೆಡ್ಯೂಲ್ ಸ್ವತ್ತುಗಳ ಜಂಟಿ ಸ್ವಾಧೀನ ಹೊಂದಿರಲಿಲ್ಲವೆಂದು ಹೇಳಿಕೊಂಡಿರುತ್ತಾರೆ.

13. ವಾದಿಯರ ಪರವಾಗಿ ಒಟ್ಟು ಒಂದು ಸಾಕ್ಷಿ ವಿಚಾರಣೆ ಮಾಡಿದ್ದು, 1ನೇ ವಾದಿ ಸ್ವತಃ ಪಿಡಬ್ಲೂ.1 ರಾಗಿ ಸಾಕ್ಷಿ ನುಡಿದು ತಮ್ಮ ಮುಖ್ಯ ವಿಚಾರಣೆ ಶಪಥಪತ್ರದಲ್ಲಿ ವಾದಪತ್ರದ ಅಂಶಗಳನ್ನು ಪುನರುಚ್ಚರಿಸಿದ್ದು, ನಿಪಿ-1 ರಿಂದ 43 ದಾಖಲೆಗಳನ್ನು ಹಾಜರ್‌ಪಡಿಸಿದ್ದು, ನಿಪಿ-1 ವಾದಿಯರ ಕುಟುಂಬದ ವಂಶವೃಕ್ಷವಾಗಿದ್ದು, ನಿಪಿ-2 ರಿಂದ 30 ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ವಿವಿಧ ಸಾಲಿನ ಪಹಣಿ ಪತ್ರಿಕೆಗಳಾಗಿದ್ದು, ನಿಪಿ-31 ರಿಂದ 39 ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಐ.ಎಲ್ ಮತ್ತು ಆರ್.ಆರ್.ಉತಾರ್ ಹಾಗೂ ಕರ ಆಕರಣೆ ಉತಾರ್‌ಗಳಾಗಿದ್ದು, ನಿಪಿ-40 ಎಂ.ಎ.20/2008 ರ ಆರ್ಡರ್‌ಶೀಟ್‌ನ ನಕಲಾಗಿದ್ದು, ನಿಪಿ-41 ಗುನ್ನಾ ನಂಬರ್ 169/2008 ರ ಪ್ರಥಮ ವರ್ತಮಾನ ಪ್ರತಿಯಾಗಿದ್ದು, ನಿಪಿ-42 ಮತ್ತು 43 ಸಿ.ಸಿ.303/07 ರ ಆರ್ಡರ್‌ಶೀಟ್ ಮತ್ತು ಆಪಾದನೆ ಪಟ್ಟಿಯ ನಕಲುಗಳಾಗಿರುತ್ತವೆ. ಪಿಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಹೇಳಿಕೊಂಡಿರುತ್ತಾರೆ.

Mb

Scanned with CamScanner

"ದಾವಾ ಆಸ್ತಿಗಳು ಸರ್ವೆ ನಂ. 63/1, 64/2, 54/1 ಗಳನ್ನು ನಾವು ಸಹೋದರರೆಲ್ಲರೂ ಕೂಡಿ ನಮ್ಮ ತಾಯಿ ಹೆಸರಿನಲ್ಲಿ ಖರೀದಿಸಿರುತ್ತೇವೆ. ಉಳಿದ ಆಸ್ತಿಗಳು ನಮ್ಮ ತಾತನಿಂದ ಬಂದಿರುತ್ತದೆ. ನಮ್ಮ ತಾಯಿಯ ಹೆಸರಿನಲ್ಲಿ ಯಾವ ವರ್ಷದಲ್ಲಿ ಕ್ರಯ ಆಗಿರುತ್ತದೆಂದು ನನಗೆ ಗೊತ್ತಿಲ್ಲ. 63/1 ಮತ್ತು 64/2 ಆಸ್ತಿಗಳನ್ನು 60 ಸಾವಿರ ರೂ.ಗಳಿಗೆ ಖರೀದಿಸಿದ್ದು, ಸರ್ವೆ ನಂ. 54/1 ಎಷ್ಟು ಹಣಕ್ಕೆ ಖರೀದಿಸಿದ್ದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಕ್ರಯದ ಹಣ ಕೊಡುವಾಗ ನಾನು ಹಾಜರಿರಲ್ಲಿಲ್ಲ. ಸದರಿ ಆಸ್ತಿಗಳನ್ನು ಖರೀದಿಸಿದಾಗ ನನಗೆ 20 ವರ್ಷ ವಯಸ್ಸಾಗಿತ್ತು".

ಸಾಕ್ಷಿಯ ಮೇಲಿನ ಹೇಳಿಕೆಯನ್ನು ಕೂಲಂಕುಶವಾಗಿ ಪರಿಶೀಲಿಸಿದರೆ ದಾವಾ ಆಸ್ತಿಗಳ ಪೈಕಿ ಐಟಂ ನಂ.6 ಮತ್ತು 7, ಸ್ವತ್ತುಗಳು ವಾದಿಯ ತಾಯಿ 2ನೇ ಪ್ರತಿವಾದಿ ಹನುಮಕ್ಕಳ ಹೆಸರಿನಲ್ಲಿ ಖರೀದಿಸಿದ್ದಿರುತ್ತದೆನ್ನುವುದು ಸ್ಪಷ್ಟವಾಗಿರುತ್ತದೆ. ವಾದಿಯರ ಪ್ರಕಾರ ಅವಳ ಹೆಸರಿಗೆ ಒಟ್ಟು ಕುಟುಂಬದ

Scanned with CamScanner

ವರಮಾನದಿಂದ ಖರೀದಿಸಿದ್ದಿರುತ್ತದೆಂದು ಪ್ರತಿಪಾದಿಸಿದ್ದು, ಅದರಂತೆ ಡಿಡಬ್ಲ್ಯೂ.1 ರವರು ನೀಡಿದ ಹೇಳಿಕೆಯಲ್ಲಿ ಹೇಳಿರುವಂತೆ ತಾವು ಸಹೋದರರೆಲ್ಲರೂ ಕೂಡಿ ಸದರಿ ಸ್ವತ್ತುಗಳನ್ನು ತಮ್ಮ ತಾಯಿ ಹೆಸರಿನಲ್ಲಿ ಖರೀದಿಸಿರುವುದಾಗಿ ಹೇಳಿಕೊಂಡಿರುತ್ತಾರೆ. ಮುಂದುವರೆದ ಪಾಟೀ ಸವಾಲಿನಲ್ಲಿ ಸ್ವತಃ ಡಿಡಬ್ಲ್ಯೂ.1 ರವರು ಸದರಿ ಸ್ವತ್ತುಗಳನ್ನು ಖರೀದಿಸುವ ಸಂದರ್ಭದಲ್ಲಿ ತನಗೆ ಕೇವಲ 20 ವರ್ಷ ವಯಸ್ಸಾಗಿದ್ದು ಮತ್ತು ಸ್ವತ್ತು ಖರೀದಿಸುವಂತಹ ವೈಯುಕ್ತಿಕ ವರಮಾನ ಇರಲಿಲ್ಲವೆನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಹೀಗಿರುವಾಗ ದಾವಾ ಆಸ್ತಿ ಐಟಂ ನಂ.6 ಮತ್ತು 7 ಸ್ವತ್ತುಗಳು 2ನೇ ಪ್ರತಿವಾದಿಯ ಹೆಸರಿಗೆ ಒಟ್ಟು ಕುಟುಂಬದ ಪರವಾಗಿ ಖರೀದಿಸಿರುತ್ತಾರೆನ್ನುವ ಪ್ರತಿಪಾದನೆ ನಂಬಲರ್ಹವಾಗಿರುವುದಿಲ್ಲ. ಅದೇ ರೀತಿ ಒಟ್ಟು ಕುಟುಂಬದ ಪರವಾಗಿ ಸದರಿ ಸ್ವತ್ತುಗಳನ್ನು 2ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿಸಿದ್ದಿರುತ್ತದೆನ್ನುವ ಸಂಗತಿಯನ್ನು ವಾದಿಯರು ಸಾಕ್ಷ್ಯಾಧಾರಗಳ ಮೂಲಕ ಸಾಬೀತುಪಡಿಸಬೇಕಾಗಿದ್ದು, ಈ ಬಗ್ಗೆ ಅವರು ಹಾಜರ್‌ಪಡಿಸಿರುವ ದಾಖಲೆಗಳು ಸಮರ್ಪಕವಾಗಿರುವುದಿಲ್ಲ. ಪ್ರತಿವಾದಿಗಳು ವಿಚಾರಣೆ ಮಾಡಿರುವ ಸಾಕ್ಷಿಗಳ ಹೇಳಿಕೆಗಳಲ್ಲಿ ವಾದಿಯರು 1ನೇ ಪ್ರತಿವಾದಿಗೆ ದಾವಾ ಆಸ್ತಿಗಳನ್ನು ಖರೀದಿಸುವ ವೈಯುಕ್ತಿಕ ವರಮಾನವಿರುವುದಿಲ್ಲವೆನ್ನುವ ಬಗ್ಗೆ ಸಲಹೆ ಮಾಡಿರುತ್ತಾರಲ್ಲದೇ, ಅವರು ಚಿನ್ನಾಭರಣಗಳನ್ನು

ಮಾರಾಟ ಮಾಡಿ ಆಸ್ತಿ ಖರೀದಿಸಿರುತ್ತಾರೆನ್ನುವುದನ್ನು ಅಲ್ಲಗಳೆಯುವ ಯತ್ನ ಮಾಡಿದ್ದು, ಅದಕ್ಕೆ ವ್ಯತಿರಿಕ್ತವಾಗಿ ಸ್ವತಃ ಪಿಡಬ್ಲ್ಯೂ.1 ರವರು ತಮ್ಮ ಮುಂದುವರೆದ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಹೇಳಿಕೊಂಡಿರುತ್ತಾರೆ.

> "ನಮ್ಮ ತಾಯಿ 3–4 ಹಸುಗಳನ್ನು ಇಟ್ಟುಕೊಂಡು ಡೈರಿಗೆ ಹಾಲು ಹಾಕುತ್ತಿದ್ದರು ಎಂದರೆ ಸರಿ. ಅವರಿಗೆ ಪ್ರತಿ ವಾರ 2 ಸಾವಿರದಿಂದ 3 ಸಾವಿರ ರೂ.,ಗಳ ವರಮಾನವಿತ್ತು, ಸದರಿ ಹಣದಿಂದ ಅವರು ದಾವಾ ಸ್ವತ್ತುಗಳನ್ನು ಖರೀದಿಸಿರುತ್ತಾರೆಂದರೆ ಸರಿಯಲ್ಲ,

ಸಾಕ್ಷಿಯ ಮೇಲಿನ ಹೇಳಿಕೆಯನ್ನು ಕೂಲಂಕುಶವಾಗಿ ಪರಿಶೀಲಿಸಿದರೆ 2ನೇ ಪ್ರತಿವಾದಿ ಹಸುಗಳನ್ನಿಟ್ಟುಕೊಂಡು ಹಾಲಿನ ವ್ಯಾಪಾರ ಮಾಡುತ್ತಿದ್ದು, ಅದರಿಂದ ಅವರಿಗೆ ವಾರಕ್ಕೆ ₹ 3,000/- ರಿಂದ ₹ 4,000/- ರೂ. ಅಂದರೆ ಮಾಸಿಕ ₹ 12,000/- ರಿಂದ ₹16,000/-ಗಳ ವರಮಾನವಿತ್ತು ಎನ್ನುವುದನ್ನು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಹೀಗಾಗಿ 2ನೇ ಪ್ರತಿವಾದಿಗೆ ಆಸ್ತಿ ಖರೀದಿಸಲು ಅವಶ್ಯಕವಿರುವ ಬಂಡವಾಳ ಕ್ರೋಢೀಕರಿಸುವ ಸಾಮರ್ಥ್ಯ ಇತ್ತು

Scanned with CamScanner

ಎನ್ನುವುದನ್ನು ಸ್ವತಃ ಪಿಡಬ್ಲೂ.1 ರವರು ಒಪ್ಪಿಕೊಂಡಿರುತ್ತಾರೆ. ಹೀಗಾಗಿ ದಾವಾ ಆಸ್ತಿ ಐಟಂ ನಂ. 6 ಮತ್ತು 7 ಸ್ವತ್ತುಗಳನ್ನು 2ನೇ ಪ್ರತಿವಾದಿ ಸ್ವಯಾರ್ಜಿತವಾಗಿ ಸಂಪಾದಿಸಿರುತ್ತಾರೆನ್ನುವುದನ್ನು ಅಲ್ಲಗಳೆಯುವ ಕಾರಣಗಳಿರುವುದಿಲ್ಲ. ಸ್ವತಃ ವಾದಿಯರೇ ಒಪ್ಪಿಕೊಂಡಿರುವಂತೆ ದಾವಾ ಆಸ್ತಿ ಐಟಂ ನಂ.6 ಮತ್ತು 7 ಸ್ವತ್ತುಗಳ ಕ್ರಯಪತ್ರಗಳು 2ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಹಿಂದೂ ವಾರಸಾ ತಿದ್ದುಪಡಿ ಕಾಯ್ದೆ 1954 ರ ಕಲಂ 14 ರ ಪ್ರಕಾರ ಮಹಿಳೆಯ ಹೆಸರಿನಲ್ಲಿರುವ ಸ್ವತ್ತುಗಳು ಅವರಿಗೆ ಯಾವುದೇ ರೀತಿಯಿಂದ ದಕ್ಕಿದ್ದರೂ ಸಹ ಅವು ಅವರ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಅದೇ ರೀತಿ ಪ್ರತಿವಾದಿ ಪರ ವಕೀಲರು ತಮ್ಮ ವಾದ ಸಮರ್ಥನೆಯಲ್ಲಿ

ಎಐಆರ್ 1995 ಓರಿಸ್ಸಾ 300 ರಲ್ಲಿ ವರದಿಯಾಗಿರುವ ಸಂತನು ಕುಮಾರ್ ದಾಸ್ ಮತ್ತು ಇತರರು ವಿರುದ್ಧ ಬೈರಾಗಿ ಚರಣ್ ದಾಸ್ ಮತ್ತು ಇತರರು ಪ್ರಕರಣದಲ್ಲಿ ಗೌರವಾನ್ವಿತ ಓರಿಸ್ಸಾ ಉಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಮಾನಿಸಿದ್ದಿರುತ್ತದೆ.

> (B) Hindu Law- joint family property purchased in name of female member- Presumption that it is joint family property does not arise.

ಮೇಲಿನ ತೀರ್ಪಿನ ಸಿದ್ಧಾಂತದ ಪ್ರಕಾರ ಅವಿಭಕ್ತ ಕುಟುಂಬದ ಹೆಣ್ಣುಮಕ್ಕಳ ಹೆಸರಿನಲ್ಲಿರುವ ಆಸ್ತಿಗಳು ಅವಿಭಕ್ತ ಕುಟುಂಬದ ಸ್ವತ್ತುಗಳು ಎನ್ನುವ ಬಗ್ಗೆ ಪೂರ್ವ ಭಾವನೆ ಇರುವುದಿಲ್ಲ. ಬದಲಾಗಿ ಅದು ಅವಿಭಕ್ತ ಕುಟುಂಬದ ಸ್ವತ್ತಾಗಿರುತ್ತದೆಂದು ಪ್ರತಿಪಾದಿಸುವ ವ್ಯಕ್ತಿಗಳು ತಮ್ಮ ಪ್ರತಿಪಾದನೆಯನ್ನು ಸಾಕ್ಷ್ಯಾಧಾರಗಳ ಮೂಲಕ ನಿರೂಪಿಸಬೇಕಾಗಿರುತ್ತದೆನ್ನುವುದನ್ನು ತಳ್ಳಿಹಾಕುವಂತಿಲ್ಲ. ಈ ಪ್ರಕರಣದಲ್ಲಿ ವಾದಿಯರು ದಾವಾ ಆಸ್ತಿ ಐಟಂ ನಂ.6 ಮತ್ತು 7 ಸ್ವತ್ತುಗಳು ಅವಿಭಕ್ತ ಕುಟುಂಬದ ಪರವಾಗಿ 2ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿದ್ದಿರುತ್ತದೆಂದು ಹೇಳಿಕೊಂಡಿದ್ದರೂ ಸಹ ಅವುಗಳನ್ನು ಹೊಂದುವ ಆರ್ಥಿಕ ಸಾಮರ್ಥ್ಯ ಕುಟುಂಬಕ್ಕಿದ್ದ ಬಗ್ಗೆ ಮನವರಿಕೆ ಮಾಡಿಕೊಡಲು ವಿಫಲರಾಗಿರುತ್ತಾರೆ. ಸ್ವತಃ ಪಿಡಬ್ಲೂ.1 ರವರು ಒಟ್ಟು ಕುಟುಂಬದ ಸ್ವತ್ತುಗಳ ನಿರ್ವಹಣೆ ಮತ್ತು ಅಭಿವೃದ್ಧಿಗಾಗಿ 1ನೇ ಪ್ರತಿವಾದಿ ಅನೇಕ ಸಂಘ ಸಂಸ್ಥೆ ಹಾಗೂ ಬ್ಯಾಂಕುಗಳಿಂದ ಸಾಲ ಪಡೆದಿರುತ್ತಾರೆನ್ನುವುದು ಸ್ಪಷ್ಟವಾಗಿರುತ್ತದೆ. ಹೀಗಿರುವಾಗ ಒಟ್ಟು ಕುಟುಂಬದ ಪರವಾಗಿ 2ನೇ ಪ್ರತಿವಾದಿ ಹೆಸರಿಗೆ ಸ್ವತ್ತು ಖರೀದಿಸಿರುತ್ತಾರೆನ್ನುವ ಅವರ ಪ್ರತಿಪಾದನೆ ನಂಬಲು ಅಸಹಜವಾಗಿರುತ್ತದೆ. ಹೀಗಾಗಿ ದಾವಾ ಆಸ್ತಿ ಐಟಂ ನಂ.6 ಮತ್ತು 7 ಸ್ವತ್ತುಗಳು 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿದ್ದು,

Scanned with CamScanner

ಅವು ಅವಿಭಕ್ತ ಕುಟುಂಬದ ಪಿತ್ರಾರ್ಜಿತ ವರಮಾನಗಳಿಂದ ಖರೀದಿಸಿರುವ ಆಸ್ತಿಗಳೆಂದು ಪರಿಗಣಿಸಲಾಗುವುದಿಲ್ಲ.

14. ಉಳಿದ ಸ್ವತ್ತುಗಳ ಪೈಕಿ ಕೆಲವುಗಳು ವಾದಿ, ಪ್ರತಿವಾದಿಯರ ಅವಿಭಕ್ತ ಕುಟುಂಬಕ್ಕೆ ಸರ್ಕಾರದಿಂದ 1ನೇ ಪ್ರತಿವಾದಿ ಮತ್ತು ಅವರ ತಂದೆ ಹೆಸರಿಗೆ ಮಂಜೂರಿಯಾಗಿದ್ದು, ಅವುಗಳಲ್ಲಿ ವಾದಿ, ಪ್ರತಿವಾದಿಯರಿಗೆ ಪಾಲು ಮತ್ತು ಹಿಸ್ಸೆ ಇರುತ್ತದೆನ್ನುವುದನ್ನು ತಳ್ಳಿಹಾಕುವಂತಿಲ್ಲ. ಪ್ರತಿವಾದಿಯರ ಪ್ರತಿಪಾದನೆಯ ಪ್ರಕಾರ 1ನೇ ವಾದಿ ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿರುವ ತನ್ನ ಪಾಲನ್ನು ₹3,00,000/- ನಗದು ಮತ್ತು ₹2,00,000/- ಮೌಲ್ಯದ ಚಿನ್ನಾಭರಣಗಳನ್ನು ಪಂಚಾಯಿತಿದಾರರ ಸಮಕ್ಷಮ ದಿ:10-10-2005 ರಂದು ಪಡೆದಿದ್ದು, ಹೀಗಾಗಿ ದಾವೆ ಹೂಡಲು ವಾದಿಯರಿಗೆ ಅಧಿಕಾರವಿರುವುದಿಲ್ಲವೆಂದು ಹೇಳಿಕೊಂಡಿದ್ದು, ಆದರೆ ಆ ರೀತಿ ವಾದಿಯರು ತಮ್ಮ ಹಿಸ್ಸೆಯ ಬಾಬತ್ತು ಹಣ ಪಡೆದ ಬಗ್ಗೆ ಸಾಬೀತುಪಡಿಸುವಂತಹ ಯಾವುದೇ ಸಾಕ್ಷ್ಯಾಧಾರವನ್ನು ಪ್ರತಿವಾದಿಯರು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟಿರುವುದಿಲ್ಲ. ಪ್ರತಿವಾದಿಯರೇ ಹೇಳಿಕೊಂಡಿರುವಂತೆ ಒಂದು ವೇಳೆ ವಾದಿಯರು ತಮ್ಮ ಹಿಸ್ಸೆಯ ಬಾಬತ್ತಿನ ಹಣ ಪಡೆದು ಹಕ್ಕು ಬಿಡುಗಡೆ ಮಾಡಿಕೊಟ್ಟಿದ್ದಲ್ಲಿ ಈ ಬಗ್ಗೆ ಸೂಕ್ತ ದಾಖಲೆಗಳಾಗಿರುವ ಸಾಧ್ಯತೆ ಇರುತ್ತದೆನ್ನುವುದನ್ನು ತಳ್ಳಿಹಾಕುವಂತಿಲ್ಲ.

Scanned with CamScanner

ಇವತ್ತಿನವರೆಗೂ ಪ್ರತಿವಾದಿಯರು ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿಯ ವಾದಿಯರ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆಂದು ನಿರೂಪಿಸುವಂತಹ ದಾಖಲೆಗಳನ್ನು ಹಾಜರ್‌ಪಡಿಸಿರುವುದಿಲ್ಲ. ಅದೇ ರೀತಿ ಅವರ ಪರವಾಗಿ ವಿಚಾರಣೆ ಮಾಡಿರುವ ಸಾಕ್ಷಿಗಳ ಪೈಕಿ ಡಿಡಬ್ಲೂ.1 ರವರು ತಮ್ಮ ಪಾಟೀ ಸವಾಲಿನಲ್ಲಿ ಈ ಕೆಳಗಿನಂತೆ ಹೇಳಿಕೊಂಡಿರುತ್ತಾರೆ.

> "ನನ್ನ ಮುಖ್ಯ ವಿಚಾರಣೆಯಲ್ಲಿ ನಾಗರಾಜುವಿಗೆ ನಗದು ಮೂರು ಲಕ್ಷ ರೂಪಾಯಿಗಳು ಹಾಗೂ ಎರಡು ಲಕ್ಷ ರೂಪಾಯಿಯ ಬಂಗಾರ ಕೊಟ್ಟಿರುವುದಾಗಿ ಹೇಳಿದ್ದು ಈ ಬಗ್ಗೆ ದಾಖಲೆಗಳಿರುವುದಿಲ್ಲ. ಅದನ್ನು ಕೊಡುವ ಸಂದರ್ಭದಲ್ಲಿ ನಾನೂ ಸಹ ಹಾಜರಿದ್ದೆ. ಆ ಸಂದರ್ಭದಲ್ಲಿ ಹಣ ಬ್ಯಾಂಕಿನಲ್ಲಿರಲಿಲ್ಲ ಆದರೆ ಸಾಲ ಮಾಡಿ ಕೊಟ್ಟಿರುತ್ತೇನೆ. ಯಾರಿಂದ ಸಾಲ ತಂದಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಆ ಸಂದರ್ಭದಲ್ಲಿ ಪಂಚಾಯಿತಿದಾರರು ಹಾಜರಿರಲಿಲ್ಲ. ನಾನು ಹೇಳಿರುವಂತೆ ಯಾವುದೇ ಹಣ ಮತ್ತು ಬಂಗಾರ ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ.

Scanned with CamScanner

ಆತನಿಗೆ ಪಾಲು ಕೊಡಲು ತಪ್ಪಿಸಲು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ".

ಸಾಕ್ಷಿಯ ಮೇಲಿನ ಹೇಳಿಕೆಯನ್ನು ಕೂಲಂಕುಶವಾಗಿ ಪರಿಶೀಲಿಸಿದರೆ ಪ್ರತಿವಾದಪತ್ರದಲ್ಲಿ ವಾದಿಯರಿಗೆ ಒಟ್ಟು ಕುಟುಂಬದ ಆಸ್ತಿಗಳಲ್ಲಿಯ ಅವರ ಹಿಸ್ಸೆಯ ಬಾಬತ್ತು ₹5,00,000/- ಗಳನ್ನು ಪಂಚಾಯಿತಿದಾರರ ಸಮಕ್ಷಮ ಸಂದಾಯ ಮಾಡಿದ್ದಿರುತ್ತದೆಂದು ಹೇಳಿಕೊಂಡಿದ್ದು, ಆದರೆ ಪಾಟೀ ಸವಾಲಿನಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಆ ಸಂದರ್ಭದಲ್ಲಿ ಪಂಚಾಯಿತಿದಾರರು ಹಾಜರಿರಲಿಲ್ಲವೆಂದು ಹೇಳಿಕೊಂಡಿರುವುದನ್ನು ಪರಿಗಣಿಸಿದರೆ ಅವರ ಹೇಳಿಕೆ ವಾಸ್ತವದಿಂದ ಕೂಡಿರುವುದಿಲ್ಲವೆನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಅದೇ ರೀತಿ 8ನೇ ಪ್ರತಿವಾದಿ ತನ್ನ ಪ್ರತಿವಾದಪತ್ರದಲ್ಲಿ 2ನೇ ವಾದಿ ತನ್ನ ಮಗನಾಗಿರುತ್ತಾನೆಂದು ಹೇಳಿಕೊಂಡಿದ್ದರೂ ಸಹ ಅದಕ್ಕೆ ವ್ಯತಿರಿಕ್ತವಾಗಿ ತಮ್ಮ ಪಾಟೀ ಸವಾಲಿನಲ್ಲಿ ಡಿಡಬ್ಲ್ಯೂ.1 ರವರು ಈ ಕೆಳಗಿನಂತೆ ಹೇಳಿಕೊಂಡಿರುತ್ತಾರೆ.

"2ನೇ ವಾದಿ ವಿಶ್ವಾಸಗೌಡ ನನ್ನ ಮಗನೆಂದರೆ ಸರಿ . ಅವನ ತಾಯಿಯ ಹೆಸರು

Mb

ಪದ್ಮ ಅವರು ತುಮಕೂರಿನಲ್ಲಿ ವಾಸವಾಗಿರುತ್ತಾರೆ.

ಪದ್ಮ ನನ್ನ ಹೆಂಡತಿಯಾಗಿರುತ್ತಾಳೆ".

ಸಾಕ್ಷಿಯ ಮೇಲಿನ ಹೇಳಿಕೆಯನ್ನು ಕೂಲಂಕುಶವಾಗಿ ಪರಿಶೀಲಿಸಿದರೆ ಪ್ರತಿವಾದಿಯರು ವಾಸ್ತವಾಂಶಗಳನ್ನು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆನ್ನುವುದನ್ನು ತಳ್ಳಿಹಾಕುವಂತಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ವಾದಿ, ಪ್ರತಿವಾದಿಯರು ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಷೆಡ್ಯೂಲ್ ಸ್ವತ್ತುಗಳ ಪೈಕಿ ದಾವಾ ಆಸ್ತಿ ಐಟಂ ನಂ.6 ಮತ್ತು 7 ಗಳನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ಅವರ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆನ್ನುವುದನ್ನು ನಿರಾಕರಿಸಲಾಗುವುದಿಲ್ಲ.

15. ಪ್ರತಿವಾದಿಯರ ಇನ್ನೊಂದು ಪ್ರತಿಪಾದನೆಯ ಪ್ರಕಾರ ಕೆಂಪಯ್ಯನಿಗೆ ಚಿಕ್ಕಪುಟ್ಟಣ್ಣ ಮತ್ತು ದೊಡ್ಡಪುಟ್ಟಣ್ಣ ಎನ್ನುವ ಇಬ್ಬರು ಮಕ್ಕಳಿದ್ದು, ಅವರಲ್ಲಿ ಇವತ್ತಿನವರೆಗೂ ವಿಭಾಗವಾಗಿರುವುದಿಲ್ಲವೆಂದು ಹೇಳಿಕೊಂಡಿದ್ದು, ಆದರೆ 1ನೇ ಪ್ರತಿವಾದಿಯ ಪ್ರತಿವಾದಪತ್ರದಲ್ಲಿ 1982 ದಲ್ಲಿಯೇ ತನ್ನ ಮತ್ತು ತನ್ನ ಸಹೋದರನ ಮಧ್ಯೆ ವಿಭಾಗವಾಗಿದ್ದು, ಆದರೆ ಅವರು ಅವಿದ್ಯಾವಂತರಾಗಿರುವುದರಿಂದ ಆಸ್ತಿಗಳ ಖಾತೆಗಳನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳದೇ ಹಾಗೆಯೇ ಇಟ್ಟುಕೊಂಡಿದ್ದು, ತಮಗೆ ಸೇರದ ಆಸ್ತಿಯಲ್ಲಿ ಪಾಲು

Scanned with CamScanner

ಕೇಳಿ ವಾದಿ ಈ ದಾವೆ ಹೂಡಿದ್ದು, ಅದು ಊರ್ಜಿತಯೋಗ್ಯವಾಗಿರುವುದಿಲ್ಲವೆಂದು ಪ್ರತಿಪಾದಿಸಿದ್ದು, ಅದೇ ರೀತಿ ಡಿಡಬ್ಲ್ಯೂ.3 ರವರು ತಮ್ಮ ವಿಚಾರಣೆಯಲ್ಲಿ 1982 ರಲ್ಲಿಯೇ ದಾವಾ ಸ್ವತ್ತುಗಳ ಬಗ್ಗೆ 1ನೇ ಪ್ರತಿವಾದಿ ಮತ್ತು ಆತನ ಸಹೋದರರ ಮಧ್ಯೆ ಪಂಚಾಯಿತಿ ಪಾರಿಕತ್ ಆಗಿದ್ದು, ಅದರ ಪ್ರಕಾರ ಪಿತ್ರಾರ್ಜಿತ ಸ್ವತ್ತುಗಳಾದ ದಾವಾ ಆಸ್ತಿ ಐಟಂ ನಂ.1 ರಿಂದ 3 ಮತ್ತು 5 ರಲ್ಲಿ 1ನೇ ಪ್ರತಿವಾದಿ ಮತ್ತು ಆತನ ಸಹೋದರನಿಗೆ ತಲಾ ಅರ್ಧ ಹಿಸ್ಸೆ ಆಸ್ತಿಗಳು ಬಂದಿರುತ್ತವೆಂದು, ಅದರಂತೆ ತಾವು ಸ್ವಾಧೀನ ಸಹ ಹೊಂದಿ ಅನುಭವಿಸುತ್ತಿರುವುದಾಗಿ ಹೇಳಿಕೊಂಡಿರುತ್ತಾರೆ. ಅದೇ ರೀತಿ ನಿಡಿ-24 ರಿಂದ 28 ದಾಖಲೆಗಳನ್ನು ಹಾಜರ್‌ಪಡಿಸಿದ್ದು, ಅವುಗಳ ಒಕ್ಕಣಿಗಳನ್ನು ಕೂಲಂಕುಶವಾಗಿ ಪರಶೀಲಿಸಿದರೆ ದಾವಾ ಆಸ್ತಿ ಐಟಂ ನಂ.1, 3 ಮತ್ತು 5 ಸ್ವತ್ತುಗಳು ಬಿ.ಪುಟ್ಟಣ್ಣನ ಹೆಸರಿನಲ್ಲಿದ್ದು, ದಾವಾ ಆಸ್ತಿ ಐಟಂ ನಂ.2 ಚಿಕ್ಕಪುಟ್ಟಣ್ಣನ ಹೆಸರಿನಲ್ಲಿರುವುದು ಕಂಡು ಬರುತ್ತದೆ. ಹಾಗೊಂದು ವೇಳೆ ಸದರಿ ಸ್ವತ್ತುಗಳು ಸಂಪೂರ್ಣವಾಗಿ 1ನೇ ಪ್ರತಿವಾದಿಗೆ ಸಂಬಂದಿಸಿದ್ದೇ ಆಗಿದ್ದಲ್ಲಿ ಅವುಗಳು ಸಂಪೂರ್ಣವಾಗಿ ಚಿಕ್ಕಪುಟ್ಟಣ್ಣನ ಹೆಸರಿನಲ್ಲಿರಬೇಕಾಗಿತ್ತು ಎನ್ನುವ ವಾದ ಅಲ್ಲಗಳೆಯಲಾಗುವುದಿಲ್ಲ. ಉಭಯ ಪಕ್ಷಕಾರರ ಪರವಾಗಿ ವಿಚಾರಣೆ ಮಾಡಿರುವ ಸಾಕ್ಷಿಗಳ ಹೇಳಿಕೆಗಳಲ್ಲಿ ಮೃತ ಕೆಂಪಯ್ಯನಿಗೆ

Scanned with CamScanner

ದೊಡ್ಡಪುಟ್ಟಣ್ಣ ಅಲಿಯಾಸ್ ಪುಟ್ಟಣ್ಣ ಬಿನ್ ಕೆಂಪಯ್ಯ ಮತ್ತು ಚಿಕ್ಕಪುಟ್ಟಣ್ಣ ಎನ್ನುವ ಇಬ್ಬರು ಮಕ್ಕಳಿರುವುದು ವ್ಯಕ್ತವಾಗುತ್ತದೆ. ಹೀಗಾಗಿ 11ನೇ ಪ್ರತಿವಾದಿ ಹೇಳಿಕೊಂಡಿರುವಂತೆ 1982 ರಲ್ಲಿ ಆಗಿರುವ ಪಂಚಾಯಿತಿ ಪಾರಿಕತ್‌ನಲ್ಲಿ ದೊಡ್ಡಪುಟ್ಟಣ್ಣ ಅಲಿಯಾಸ್ ಪುಟ್ಟಣ್ಣ ಮತ್ತು ಚಿಕ್ಕಪುಟ್ಟಣ್ಣ ಒಟ್ಟು ಕುಟುಂಬದ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಅದರಂತೆ ಆಸ್ತಿಯ ಖಾತೆಗಳು ಅವರ ಹೆಸರಿನಲ್ಲಿರುವುದು ಉಭಯ ಪಕ್ಷಕಾರರು ಹಾಜರ್‌ಪಡಿಸಿರುವ ದಾಖಲೆಗಳಿಂದ ಕಂಡು ಬರುತ್ತದೆ. ಹೀಗಿರುವಾಗ ದಾವಾ ಆಸ್ತಿ ಐಟಂ ನಂ.1, 3 ಮತ್ತು 5 ರಲ್ಲಿ 1ನೇ ಪ್ರತಿವಾದಿಗೆ ಕೇವಲ ಅರ್ಧ ಹಿಸ್ಸೆ ಇದ್ದು, ಅದರಲ್ಲಿ 1ನೇ ವಾದಿ, 1,3 ರಿಂದ 10ನೇ ಪ್ರತಿವಾದಿಯರಿಗೆ ತಲಾ 1/10 ಹಿಸ್ಸೆ ಇದ್ದು, ಉಳಿದ ದಾವಾ ಆಸ್ತಿ ಐಟಂ ನಂ.2,4, 8 ಮತ್ತು 9 ಸ್ವತ್ತುಗಳಲ್ಲಿ 1ನೇ ವಾದಿ, 1, 3 ರಿಂದ 10ನೇ ಪ್ರತಿವಾದಿಯರಿಗೆ ತಲಾ 1/10 ಹಿಸ್ಸೆ ಇರುತ್ತದೆ. ಪಾಟೀ ಸವಾಲಿನಲ್ಲಿ ಅವರ ಪ್ರತಿಪಾದನೆಗೆ ವ್ಯತಿರಿಕ್ತವಾಗಿ ಮಹತ್ವದ ಒಪ್ಪಿಗೆ ಪಡೆಯುವಲ್ಲಿ ವಾದಿಯರು ವಿಫಲರಾಗಿರುತ್ತಾರೆ. ಆದರೆ ಸದರಿ ಆಸ್ತಿಗಳಲ್ಲಿ 1ನೇ ಪ್ರತಿವಾದಿ ವಾದಿ, ಪ್ರತಿವಾದಿಯರ ಕುಟುಂಬದ ಹಿರಿಯ ಸದಸ್ಯನಾಗಿ ಅರ್ಧ ಹಿಸ್ಸೆ ಹೊಂದಿರುತ್ತಾರೆನ್ನುವುದು ಉಭಯ ಪಕ್ಷಕಾರರ ಸಾಕ್ಷಿಗಳ ಹೇಳಿಕೆಗಳಿಂದ ವ್ಯಕ್ತವಾಗುತ್ತದೆ. ಅವುಗಳಲ್ಲಿ ವಾದಿ, ಪ್ರತಿವಾದಿಯರು

Scanned with CamScanner

ಪಾಲು ಪಡೆಯಲು ಅರ್ಹರಿರುತ್ತಾರೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ.

16. ಪ್ರತಿವಾದಿಯರ ಪ್ರಕಾರ ದಾವಾ ಆಸ್ತಿ ಐಟಂ ನಂ.2 ಸಹ 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದು ಹೇಳಿಕೊಂಡಿದ್ದು, ಆದರೆ ವಾದಿ, ಪ್ರತಿವಾದಿಯರು ಹಾಜರ್‌ಪಡಿಸಿರುವ ಜಮೀನ್ ರಿ.ಸರ್ವೆ ನಂ.40 ರ ಪಹಣಿ ಪತ್ರಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಅದು 1ನೇ ಪ್ರತಿವಾದಿಯ ಹೆಸರಿನಲ್ಲಿರುವುದು ಸ್ಪಷ್ಟವಾಗಿರುತ್ತವೆ. ಹೀಗಿರುವಾಗ ಅದು 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದು ಪರಿಗಣಿಸಲಾಗುವುದಿಲ್ಲ. ಹಾಗೊಂದು ವೇಳೆ ಅದು ಅವಳ ಸ್ವಯಾರ್ಜಿತ ಆಸ್ತಿಯಾಗಿರುತ್ತದೆಂದಾದಲ್ಲಿ ಅದರ ಕ್ರಯಪತ್ರದ ನಕಲು ನ್ಯಾಯಾಲಯಕ್ಕೆ ಹಾಜರ್‌ಪಡಿಸಬಹುದಾಗಿತ್ತು. ಅಂತಹ ಯಾವುದೇ ದಾಖಲೆಯನ್ನು ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರ್‌ಪಡಿಸಿರುವುದಿಲ್ಲ. ಹೀಗಾಗಿ ದಾವಾ ಆಸ್ತಿ ಐಟಂ ನಂ.6 ಮತ್ತು 7 ಗಳನ್ನು ಹೊರತುಪಡಿಸಿ ಉಳಿದ ಸ್ವತ್ತುಗಳು ವಾದಿ, ಪ್ರತಿವಾದಿಯರ ಅವಿಭಕ್ತ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ವಾದಿಯರಿಗೆ ಪಾಲು ಇರುತ್ತದೆನ್ನುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಹೀಗಾಗಿ ವಾದಿಯರು 1ನೇ ವಿವಾದಾಂಶವನ್ನು ಹಾಗೂ ಪ್ರತಿವಾದಿಯರು 2ನೇ ವಿವಾದಾಂಶವನ್ನು ಭಾಗಶಃ

Scanned with CamScanner

ಸಾಬೀತುಪಡಿಸಿರುತ್ತಾರೆನ್ನುವ ನಿರ್ಧಾರಕ್ಕೆ ಬಂದು ನಾನು ಅವುಗಳಿಗೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

17. 3ನೇ ವಿವಾದಾಂಶ:- ಪ್ರತಿವಾದಿಯರ ಪ್ರಕಾರ ವಾದಿಯರು ದಾವೆಯನ್ನು ಸರಿಯಾಗಿ ಮೌಲ್ಯಾಧಿಕರಣ ಮಾಡಿರುವುದಿಲ್ಲ ಮತ್ತು ವಾದಪತ್ರಕ್ಕೆ ಸಂದಾಯಮಾಡಬೇಕಾದ ನ್ಯಾಯಾಂಗ ಶುಲ್ಕವನ್ನು ಸಮರ್ಪಕವಾಗಿ ಭರಿಸಿರುವುದಿಲ್ಲವೆಂದು ಹೇಳಿಕೊಂಡಿದ್ದು, ಆದರೆ ಉಭಯ ಪಕ್ಷಕಾರರು ಒಪ್ಪಿಕೊಂಡಿರುವಂತೆ ಪ್ರಸುತ್ತ ದಾವೆ ಪಾಲು ವಿಭಾಗಕ್ಕಾಗಿ ಹೂಡಿದ್ದು, ದಾವಾ ಸ್ವತ್ತು ಐಟಂ ನಂ.6 ಮತ್ತು 7 ಗಳನ್ನು ಹೊರುತಪಡಿಸಿ ಉಳಿದ ಸ್ವತ್ತುಗಳು ವಾದಿ, ಪ್ರತಿವಾದಿಯರ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಅವುಗಳನ್ನು ಅವರೆಲ್ಲರೂ ಒಟ್ಟು ಕುಟುಂಬದ ಪರವಾಗಿ ಜಂಟಿ ಸ್ವಾಧೀನಹೊಂದಿ ಅನುಬವಿಸುತ್ತಿದ್ದರೆನ್ನುವುದನ್ನು ಅಲ್ಲಗಳೆಯಲಾಗುವುದಿಲ್ಲ. ಪಾಟೀ ಸವಾಲಿನಲ್ಲಿ ವಾದಿ ಸುಮಾರು ವರ್ಷಗಳಿಂದ ಬೇರೆ ಊರಿನಲ್ಲಿ ವಾಸವಿರುತ್ತಾರೆಂದು ಹೇಳಿಕೊಂಡಿದ್ದು, ಹಾಗೆಂದ ಕಾರಣಕ್ಕೆ ಅವರು ಷೆಡ್ಯೂಲ್ ಸ್ವತ್ತುಗಳ ಸ್ವಾಧೀನ ಹೊಂದಿರುವುದಿಲ್ಲವೆಂದು ಪರಿಗಣಿಸಲಾಗುವುದಿಲ್ಲ. ಅವಿಭಕ್ತ ಕುಟುಂಬದ ಸ್ವತ್ತುಗಳನ್ನು ಕುಟುಂಬದ ಯಾವುದೇ ಸದಸ್ಯರು ಹೊಂದಿದ್ದರೂ ಸಹ ಅವರ ಸ್ವಾಧೀನ ಒಟ್ಟು ಕುಟುಂಬದ ಎಲ್ಲಾ

Scanned with CamScanner

ಸದಸ್ಯರ ಪರವಾಗಿ ಹೊಂದಿರುತ್ತಾರೆಂದು ಪರಿಗಣಿಸಬೇಕಾಗಿರುತ್ತದೆ. ಒಂದು ವೇಳೆ ಯಾವುದೇ ಒಬ್ಬ ಸದಸ್ಯ ಆಸ್ತಿಯ ಸ್ವಾಧೀನ ಹೊಂದಿರುವುದಿಲ್ಲವೆಂದು ಪ್ರತಿಪಾದಿಸುವ ಕುಟುಂಬದ ಸದಸ್ಯರು ಅಂತಹ ಸದಸ್ಯನನ್ನು ಪಾಲು ಕೊಡದೇ ಒತ್ತಾಯ ಪೂರ್ವಕ ಸ್ವಾಧೀನ ತಪ್ಪಿಸಿರುವುದನ್ನು ಸಾಬೀತುಪಡಿಸಬೇಕಾಗಿರುತ್ತದೆ. ಈ ಪ್ರಕರಣದಲ್ಲಿ ಪ್ರತಿವಾದಿಯರು ದಾವಾ ಷೆಡ್ಯೂಲ್ ಆಸ್ತಿಗಳಿಂದ ವಾದಿಯರನ್ನು ಬಲವಂತವಾಗಿ ಸ್ವಾಧೀನ ತಪ್ಪಿಸಿರುವ ಬಗ್ಗೆ ಎಲ್ಲಿಯೂ ಹೇಳಿಕೊಂಡಿರುವುದಿಲ್ಲ. ಹೀಗಾಗಿ ವಾದಿಯರು ದಾವೆಯನ್ನು ಕರ್ನಾಟಕ ನ್ಯಾಯಾಂಗ ಶುಲ್ಕ ಮತ್ತು ದಾವೆಗಳ ಮೌಲ್ಯ ನಿರ್ಧರಣೆ ಕಾಯ್ದೆಯಡಿ ಸಂದಾಯ ಮಾಡಬೇಕಾದ ನ್ಯಾಯಾಂಗ ಶುಲ್ಕ ಭರಿಸಿದ್ದು, ಈ ಬಗ್ಗೆ ಪ್ರತ್ಯೇಕ ಮೌಲ್ಯ ನಿರ್ಧರಣೆ ಪಟ್ಟಿ ಸಹ ಹಾಜರ್‌ಪಡಿಸಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ಪ್ರತಿಪಾದಿಸಿರುವ ಪ್ರತಿವಾದಿಯರು ತಮ್ಮ ಪ್ರತಿಪಾದನೆಯನ್ನು ನಿರೂಪಿಸುವಂತಹ ಮೌಲ್ಯ ನಿರ್ಧರಣಾ ಪಟ್ಟಿ ಸಲ್ಲಿಸಿರುವುದಿಲ್ಲ. ಹೀಗಾಗಿ ಅವರ ಪ್ರತಿಪಾದನೆ ನಂಬಲು ಅರ್ಹವಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದರೆ ವಾದಿಯರು 3ನೇ ವಿವಾದಾಂಶವನ್ನು ಸಾಬೀತುಪಡಿಸಿರುತ್ತಾರೆನ್ನುವ ನಿರ್ಧಾರಕ್ಕೆ ಬಂದುನಾನು ಅದಕ್ಕೆ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

Scanned with CamScanner

18. <u>4ನೇ ವಿವಾದಾಂಶ</u>:- ವಾದಿಯರ ಪ್ರಕಾರ 1ನೇ ವಾದಿಯನ್ನೊಳಗೊಂಡು 1ನೇ ಪ್ರತಿವಾದಿಗೆ ಒಟ್ಟು 10ಜನ ಮಕ್ಕಳಿದ್ದು, ಅವರ ಪೈಕಿ 1ನೇ ರಾಮಾಂಜಿನಪ್ಪ 3ನೇ ಪ್ರತಿವಾದಿಯನ್ನು ವಾರಸುದಾರರಾಗಿ ಬಿಟ್ಟು ಮೃತಪಟ್ಟಿದ್ದು, ಇನ್ನೊಬ್ಬ ಮಗ ಮನೋಹರ್ ಸಂತಾನವಿಲ್ಲದೇ ತೀರಿಕೊಂಡಿದ್ದು, ಹೀಗಾಗಿ 1ನೇ ವಾದಿಯನ್ನೊಳಗೊಂಡು ಒಟ್ಟು 9ಜನ ಮಕ್ಕಳಿದ್ದು, 1ನೇ ಪ್ರತಿವಾದಿ ಸೇರಿ ಷೆಡ್ಯೂಲ್ ಸ್ವತ್ತುಗಳಲ್ಲಿ ಒಟ್ಟು 10 ಹಿಸ್ಸೆಗಳಾಗಬೇಕಾಗಿದ್ದು, ಆದರಂತೆ ದಾವಾ ಆಸ್ತಿ ಐಟಂ ನಂ.6 ಮತ್ತು 7 ಗಳನ್ನು ಹೊರತುಪಡಿಸಿ ದಾವಾ ಆಸ್ತಿ ಐಟಂ ನಂ.1, 3 ಮತ್ತು 5 ರಲ್ಲಿ 1ನೇ ಪ್ರತಿವಾದಿಗೆ ಕೇವಲ ಅರ್ಧ ಹಿಸ್ಸೆ ಇದ್ದು, ಅದರಲ್ಲಿ 1ನೇ ವಾದಿ, 1,3 ರಿಂದ 10ನೇ ಪ್ರತಿವಾದಿಯರಿಗೆ ತಲಾ 1/10 ಹಿಸ್ಸೆ ಇದ್ದು, ಉಳಿದ ದಾವಾ ಆಸ್ತಿ ಐಟಂ ನಂ.2,4, 8 ಮತ್ತು 9 ಸ್ವತ್ತುಗಳಲ್ಲಿ 1ನೇ ವಾದಿ, 1, 3 ರಿಂದ 10ನೇ ಪ್ರತಿವಾದಿಯರಿಗೆ ತಲಾ 1/10 ಹಿಸ್ಸೆ ಇರುತ್ತದೆ. ಅದೇ ರೀತಿ 2ನೇ ವಾದಿ 8ನೇ ಪ್ರತಿವಾದಿಯ ಮಗನಾಗಿರುವುದರಿಂದ 8ನೇ ಪ್ರತಿವಾದಿಗೆ ಬರುವ ಹಿಸ್ಸೆಯಲ್ಲಿ ಆತನಿಗೆ ಅರ್ಧ ಹಿಸ್ಸೆ ಇರುತ್ತದೆನ್ನುವುದನ್ನು ತಳ್ಳಿಹಾಕುವಂತಿಲ್ಲ. ದಾವಾ ಆಸ್ತಿ ಐಟಂ ನಂ.6 ಮತ್ತು 7 ಗಳನ್ನು ಈಗಾಗಲೇ ಚರ್ಚಿಸಿರುವಂತೆ 2ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುವುದರಿಂದ ಅವುಗಳಲ್ಲಿ ವಾದಿ ಮತ್ತು ಇತರೆ

Scanned with CamScanner

ಪ್ರತಿವಾದಿಯರಿಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲವೆಂಬುದನ್ನು ಸ್ಪಷ್ಟವಾಗುತ್ತದೆ. ಆದುದರಿಂದ ವಾದಿಯರು ಈ ವಿವಾದಾಂಶವನ್ನು ಭಾಗಶಃ ಸಾಬೀತುಪಡಿಸಿರುತ್ತಾರೆಂಬುದಾಗಿ ನಿರ್ಧಾರಕ್ಕೆ ಬಂದು ನಾನು ಅದಕ್ಕೆ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

12. <u>5ನೇ ವಿವಾದಾಂಶ</u>:- ಮೇಲಿನ ಅಂಶದಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಮತ್ತು ಅದರಲ್ಲಿ ತಿಳಿಸಿರುವ ನಿರ್ಣಯದಿಂದಾಗಿ ಈ ಕೆಳಗಿನಂತೆ ಮಾಡಿದೆ:

## ಆದೇಶ

ವಾದಿಯರ ದಾವೆಯನ್ನು ಖರ್ಚು ಸಹಿತ ಭಾಗಶಃ ಡಿಕ್ರಿ ಮಾಡಲಾಗಿದೆ.

ಅದರಂತೆ ದಾವಾ ಷೆಡ್ಯೂಲ್ ಆಸ್ತಿ ಐಟಂ ನಂ.6 ಮತ್ತು 7 ಗಳನ್ನು ಹೊರತುಪಡಿಸಿ ದಾವಾ ಆಸ್ತಿ ಐಟಂ ನಂ.1, 3 ಮತ್ತು 5 ರಲ್ಲಿ 1ನೇ ಪ್ರತಿವಾದಿಗೆ ಕೇವಲ ಅರ್ಧ ಹಿಸ್ಸೆ ಇದ್ದು ಸದರಿ ಅರ್ಧ ಹಿಸ್ಸೆಯಲ್ಲಿ 1ನೇ ವಾದಿ, 1, 3 ರಿಂದ 10ನೇ ಪ್ರತಿವಾದಿಯರಿಗೆ

Scanned with CamScanner

ತಲಾ 1/10 ಹಿಸ್ಸೆ ಇದ್ದು, ಅದೇ ರೀತಿ ದಾವಾ ಆಸ್ತಿ ಐಟಂ ನಂ.2,4, 8 ಮತ್ತು 9 ಸ್ವತ್ತುಗಳಲ್ಲಿ 1ನೇ ವಾದಿ, 1, 3 ರಿಂದ 10ನೇ ಪ್ರತಿವಾದಿಯರಿಗೆ ತಲಾ 1/10 ಹಿಸ್ಸೆ ಇರುತ್ತದೆ. 2ನೇ ವಾದಿಗೆ 8ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಯಲ್ಲಿ ಅರ್ಧ ಪಾಲು ಇದ್ದು, ಅವುಗಳನ್ನು ಅವರು ಪ್ರತಿವಾದಿಯರಿಂದ ಹದ್ದುಬಸ್ತಿನೊಂದಿಗೆ ವಿಭಾಗ ಮಾಡಿಕೊಂಡು ಪ್ರತ್ಯೇಕ ಸ್ವಾಧೀನ ಹೊಂದಲು ಅರ್ಹರಿರುತ್ತಾರೆ.

ಈ ಪ್ರಕಾರ ಪ್ರಾರಂಭಿಕ ಡಿಕ್ರಿ ಬರೆಯತಕ್ಕದ್ದು.

(ಮೇಲ್ಕಂಡ ತೀರ್ಪನ್ನು ನೇರ ಗಣಕಯಂತ್ರದ ಮೂಲಕ ಬೆರಳಚ್ಚುಗಾರ್ತಿಗೆ ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ಕೊಟ್ಟು, ಇಂದು 23ನೇ ಮೇ 2012 ರಂದು ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ, ತಿದ್ದಿ ಸಹಿ ಮಾಡಿ ಉಚ್ಚರಿಸಲಾಯಿತು).

23/5/012

(ಮಲ್ಲಿಕಾರ್ಜುನ)
ಹಿರಿಯ ಸಿವಿಲ್ ನ್ಯಾಯಾಧೀಶರು,
ದೊಡ್ಡಬಳ್ಳಾಪುರ.

Scanned with CamScanner

# ಅ ನು ಬಂ ಧ

1. ವಾದಿಯರ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ವಿವರ:-

| | | |
|---|---|---|
| ಪಿಡಬ್ಲ್ಯೂ.1 | ನಾಗರಾಜ್ | 27/10/2010 |

2. ವಾದಿಯ ಪರವಾಗಿ ಗುರುತಿಸಿದ ದಾಖಲೆಗಳ ವಿವರ:

| | |
|---|---|
| ನಿಪಿ-1 | ವಂಶವೃಕ್ಷ |
| ನಿಪಿ-2 ರಿಂದ 4 | ಹಕ್ಕು ಬದಲಾವಣೆ ಆದೇಶ ವಹಿ ಉತಾರ್ |
| ನಿಪಿ-5 ರಿಂದ 30 | ಪಹಣಿ ಪತ್ರಿಕೆಗಳು |
| ನಿಪಿ-31 ರಿಂದ 38 | ಐಎಲ್ ಮತ್ತು ಆರ್‌ಆರ್ ಉತಾರ್‌ಗಳು |
| ನಿಪಿ-39 | ಫಾರಂ ನಂ.10ರ ಉತಾರ್ |
| ನಿಪಿ-40 | ಎಂ.ಎ.20/08 ರ ಆದೇಶದ ನಕಲು |
| ನಿಪಿ-41 | ಕ್ರೈಂ 169/06 ರ ಆರ್ಡರ್‌ಶೀಟ್‌ನ ನಕಲು |
| ನಿಪಿ-42 | ಕ್ರೈಂ 169/06 ರ ಎಫ್‌ಐಆರ್‌ನ ನಕಲು |
| ನಿಪಿ-43 | ಚಾರ್ಜ್‌ಶೀಟ್ |

3.ಪ್ರತಿವಾದಿಯರ ಪರವಾಗಿ ವಿಚಾರಣೆ ಮಾಡಿದ ಸಾಕ್ಷಿಗಳ ವಿವರ:-

| | | |
|---|---|---|
| ಡಿಡಬ್ಲ್ಯೂ.1 | ಕುಬೇರ | 06/04/2011 |
| ಡಿಡಬ್ಲ್ಯೂ.2 | ರಾಮಕೃಷ್ಣಯ್ಯ | 30/01/2012 |
| ಡಿಡಬ್ಲ್ಯೂ.3 | ಡಿ. ಪ್ರಕಾಶ್‌ಮೂರ್ತಿ | 17/02/2012 |

4. ಪ್ರತಿವಾದಿಯರ ಪರವಾಗಿ ಗುರುತಿಸಿದ ದಾಖಲೆಗಳ ವಿವರ:

| | |
|---|---|
| ನಿಡಿ-1 | ದಿ:5-11-97ರ ಕ್ರಯಪತ್ರದ ದೃಢೀಕೃತ ನಕಲು |
| ನಿಡಿ-2 ರಿಂದ 4 | ಹಕ್ಕು ಬದಲಾವಣೆ ಆದೇಶ ವಹಿ ಉತಾರ್‌ಗಳು |
| ನಿಡಿ-5 ರಿಂದ 8 | ಋಣಭಾರ ಪತ್ರಗಳು |
| ನಿಡಿ-9 ಮತ್ತು 10 | ಪಟ್ಟಾಪುಸ್ತಕಗಳು |
| ನಿಡಿ-11 | ಬ್ಯಾಂಕ್‌ನಿಂದ ಸಾಲದ ಪಡೆದ ದಾಖಲೆ |
| ನಿಡಿ-12 ರಿಂದ 17 | ಪಹಣಿ ಪತ್ರಿಕೆಗಳು |

Scanned with CamScanner

| | |
|---|---|
| ನಿಡಿ-18 ಮತ್ತು 19 | ಐಎಲ್ ಮತ್ತು ಆರ್.ಆರ್.ಉತಾರ್ |
| ನಿಡಿ-20 | ರಸೀದಿ ಪಟ್ಟಾ ಪುಸ್ತಕ |
| ನಿಡಿ-21 | ದಿಃ5-6-92 ರ ಕ್ರಯಪತ್ರದ ಧೃಢಿಕೃತ ನಕಲು |
| ನಿಡಿ-22 | ಮುಕ್ತಿಯಾರ್‌ನಾಮೆಪತ್ರ |
| ನಿಡಿ-23 ರಿಂದ 28 | ಪಹಣಿ ಪತ್ರಿಕೆಗಳು |
| ನಿಡಿ-29 ಮತ್ತು 30 | ಬೇಬಾಕಿ ಪತ್ರಗಳು |
| ನಿಡಿ-31 | ಕರ ಆಕರಣೆ ಉತಾರ್ |

ಹಿರಿಯ ಸಿವಿಲ್ ನ್ಯಾಯಾಧೀಶರು,
ದೊಡ್ಡಬಳ್ಳಾಪುರ. 23-5-2012

Scanned with CamScanner